ಸಿಸಿ ಸಂಖ್ಯೆ: 25/2021
ಪಿಡಬ್ಲ್ಯೂ: 01
ದಿನಾಂಕ: 06.06.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಎಫ್ ಸಿ ಹೆಚ್ ವಕೀಲರಿಂದ:.</u>**

ನನ್ನ ಊರು ಮೆಳ್ಳಾಗಟ್ಟಿ. ನಾನು ಕೃಷಿ ಮಾಡುತ್ತೇನೆ. ನನ್ನ ಹೆಸರಿನಲ್ಲಿ 10 ಎಕರೆ ಜಮೀನು ಇರುತ್ತದೆ. ಆರೋಪಿ ಮೋಟಳ್ಳಿ ಗ್ರಾಮದವನು. ಆರೋಪಿ ನಮ್ಮ ಊರಿನ ಹೆಣ್ಣನ್ನು ಮದುವೆ ಮಾಡಿಕೊಂಡಿರುತ್ತಾರೆ, ಆರೋಪಿ ಹೆಂಡತಿ ಮನೆಯವರು ಮತ್ತು ನಾವು ಸಂಬಂಧಿಕರು ಇರುತ್ತೇವೆ ಆದ್ದರಿಂದ ಪರಿಚಯ. ನಾನು ಆರೋಪಿಗೆ 3 ಲಕ್ಷ ಹಣ ಕೊಟ್ಟಿದ್ದೇನೆ. ಸದರಿ 10 ಎಕರೆ ಜಮೀನಿನಲ್ಲಿ ವರ್ಷಕ್ಕೆ 6 ಲಕ್ಷ ನಿವ್ವಳ ಬೆಲೆ ತೆಗೆಯುತ್ತೇವೆ. ಅದರಲ್ಲಿ ಖರ್ಚು ತೆಗೆದು 4 ಲಕ್ಷ ಉಳಿಯುತ್ತದೆ. ನಾವು ಮನೆಯಲ್ಲಿ 10-12 ಜನ ಇರುತ್ತೇವೆ. ನಮ್ಮ ಮನೆಗೆ ಖರ್ಚು ವಾರ್ಷಿಕ ಒಂದರಿಂದ ಒಂದೂವರೆ ಲಕ್ಷ ಬರುತ್ತದೆ. ನಮ್ಮ ಮನೆಯಲ್ಲಿ ಶಾಲೆ ಕಲಿಯುವವರು ಯಾರು ಇರುವುದಿಲ್ಲ. ಮದುವೆಯಾದ ಗಂಡು ಮಕ್ಕಳು ಇಬ್ಬರು ಇರುತ್ತಾರೆ. ಅವರ ಮದುವೆಯಾಗಿ 15 ವರ್ಷ ಆಗಿರುತ್ತದೆ. ಆರೋಪಿಗೆ ಯಾವ ದಿನಾಂಕದಂದು ಹಣ ಕೊಟ್ಟಿದ್ದೇನೆ ಅಂತಾ ಹೇಳಲು ಬರುವುದಿಲ್ಲ ಏಕೆಂದರೆ ನಾನು ಶಾಲೆ ಕಲಿತಿಲ್ಲ. ನಾನು ಆರೋಪಿಗೆ ನೀಡಿರುವ ನೋಟಿಸಿನಲ್ಲಿ ದಿನಾಂಕ ಹೇಳಿ ಬರೆಸಿಲ್ಲ. ಸಾಮಾನ್ಯವಾಗಿ ಹಳ್ಳಿಯಲ್ಲಿ ಯಾಗಾದರೂ ಹಣ ಕೊಡುವಾಗ ಒಬ್ಬ ಹಿರಿಯರನ್ನು ನಡುವೆ ಮಾಡಿಕೊಂಡು ಕೊಡುತ್ತಾರೆ ಎಂದರೆ ಸರಿ ಆದರೆ ಆರೋಪಿ ಸಂಬಂಧಿಕನಾಗಿದ್ದರಿಂದ ಹಣ ಕೊಟ್ಟಿರುತ್ತೇನೆ. ಆರೋಪಿ ವ್ಯಾಪಾರ ಮಾಡುತ್ತಾನೆ. ಚಹಾಪುಡಿ ವ್ಯಾಪಾರ ಮಾಡುತ್ತಿದ್ದ ಮತ್ತು ಬೇರೆ ಯಾವುದೋ ವ್ಯಾಪಾರ ಮಾಡುತ್ತಿದ್ದ ಅದು ನನಗೆ ಗೊತ್ತಿಲ್ಲ. ಆರೋಪಿಗೆ ನಗದುರೂಪದಲ್ಲಿ ಹಣ ಕೊಟ್ಟಿದ್ದೇನೆ. ಟ್ರ್ಯಾಕ್ಟರ ತೆಗೆದುಕೊಳ್ಳಲು ಅಂತಾ ಹಣ ತೆಗೆದು ಇಟ್ಟಿದ್ದೆವು ಅದೇ ಸಮಯದಲ್ಲಿ ಆರೋಪಿ ಕೇಳಿದ್ದರಿಂದ ಅದೇ ಹಣವನ್ನು ಕೊಟ್ಟಿರುತ್ತೇನೆ. ಆರೋಪಿ ಮದುವೆಯಾದ 6-7 ವರ್ಷದ ನಂತರ ಆರೋಪಿಗೆ ಮತ್ತು ನಮಗೆ ಕೊಡು ತೆಗೆದುಕೊಳ್ಳುವ ವ್ಯವಹಾರ ಆಗುತ್ತಿತ್ತು. ಆರೋಪಿಯ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ನನಗೆ ನೆನಪಿಲ್ಲ. ಈ ಮೊದಲು ಆರೋಪಿಗೆ 50 ಸಾವಿರ ಕೊಟ್ಟಿದ್ದೆ ಮರಳಿ ಕೊಟ್ಟಿದ್ದ. ನಂತರ ಒಂದು ಲಕ್ಷ ಕೊಟ್ಟಿದ್ದೆ ಅದನ್ನು ಸಹ ಮರಳಿ ಕೊಟ್ಟಿದ್ದಾನೆ. ಹೀಗೆ ಸಾಕಷ್ಟು ಸಲ ಕೊಡು ತೆಗೆದುಕೊಳ್ಳುವ ವ್ಯವಹಾರ ಆಗಿದೆ ಆದರೆ 3 ಲಕ್ಷ ಮರಳಿ ಕೊಟ್ಟಿಲ್ಲ. ಈ ವ್ಯವಹಾರಕ್ಕಿಂತ ಮೊದಲು ಯಾವ ದಿನಾಂಕದಂದು ಕೊಟ್ಟಿದ್ದೇನೆ ನೆನಪಿಲ್ಲ. 2016 ರಿಂದ ಈಕಡೆ ಸವಣೂರಿನಲ್ಲಿ ಸಾಕಷ್ಟು ಮಳೆ ಆಗಿರುತ್ತದೆ ಎಂದರೆ ಸರಿ. ಉತ್ಪನ್ನ ಸರಿಯಾಗಿ ಬಂದಿಲ್ಲ ಎಂದರೆ ಸರಿಯಲ್ಲ.

ದ್ರಾಕ್ಷಾಣವ್ವ ನನಗೆ ಮಗಳು ಆಗಬೇಕು. ಷಣ್ಮುಖಗೌಡ ಮತ್ತು ನಾಗನಗೌಡ ಮೊಮ್ಮಕ್ಕಳು ಆಗಬೇಕು. ಕನಕನವಾಡದ ರಾಮನಗೌಡ ಸಂಬಂಧಿಕನಲ್ಲ ಪರಿಚಯ. ಆರೋಪಿಗೂ ನನಗೂ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಆರೋಪಿಯೇ ಬರೆದುಕೊಟ್ಟಿರುತ್ತಾನೆ. ಚೆಕ್ ಮೇಲಿರುವ ಹಸ್ತಾಕ್ಷರ ಆರೋಪಿಯನದಲ್ಲ ಎಂದರೆ ಸರಿಯಲ್ಲ. ಚೆಕ್ ಕೊಟ್ಟ ನಂತರ ಅದನ್ನು ಹುರಳಿಕುಪ್ಪಿ ಬ್ಯಾಂಕಿಗೆ ಹಾಕಿರುತ್ತೇನೆ. ಚೆಕ್ಕನ್ನು ಬ್ಯಾಂಕಿಗೆ ನೀಡಿರುವ ದಿನಾಂಕ ಹೇಳಲು ಬರುವುದಿಲ್ಲ. ಚೆಕ್ಕಿನಲ್ಲಿ ದುಡ್ಡು ಇಲ್ಲ ಅಂತಾ ಹೇಳಿರುತ್ತಾರೆ. ನಂತರ ನಾನು ನಾಲ್ಕು ಜನರನ್ನು ಕೇಳಿದಾಗ ವಕೀಲರನ್ನು ಹಿಡಿದುಕೊಂಡು ನೋಟಿಸು ಕಳುಹಿಸಿ ಅಂತಾ ಹೇಳಿದರು ಆದ್ದರಿಂದ ನೋಟಿಸು ಕಳುಹಿಸಿರುತ್ತೇನೆ. ನಾನು ಕಳುಹಿಸಿದ ನೋಟಿಸು ಆರೋಪಿಗೆ ಮುಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ದುಡ್ಡು ಕೊಟ್ಟಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟಿಸಿನಲ್ಲಿ ಮತ್ತು ದೂರಿನಲ್ಲಿ ಬರೆದ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಚೆಕ್ ಕಳೆದ ಕುರಿತು ನಾನು ಚೆಕ್ ಬ್ಯಾಂಕಿಗೆ ಕೊಡುವ ಮೊದಲೇ ದೂರು ನೀಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಹತ್ತಿರ ಯಾವುದೇ ಹಣ ಪಡೆದುಕೊಂಡಿಲ್ಲ, ನನ್ನ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ, ನನಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಆತ ಕಳೆದು ಹೋದ ಚೆಕ್ಕನ್ನು ತೆಗೆದುಕೊಂಡು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದ್ರಾಕ್ಷಾಣವ್ವ ಇವರ ಮಾತು ಕೇಳಿ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.